# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡಾವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ದಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪರಶುರಾಮ್‌ರಾವ್ ಬಿ.ಎಲ್, ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:30/11/2021 ರಂದು ಮಂಗಳವಾರ ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಪರಶುರಾಮ್‌ರಾವ್ ಬಿ.ಎಲ್. ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ಹಾಗೂ ವಾರ್ಡ್ 144ರ ನೋಡಲ್ ಅಧಿಕಾರಿಗಳು.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–144.
3. ಶ್ರೀ. ಮಂಜುನಾಥ್. ಎ.ಎಸ್.ಐ. ಸಿದ್ದಾಪುರ ಪೊಲೀಸ್ ಠಾಣೆ.
4. ಶ್ರೀ ಮಹಾದೇವಯ್ಯ, ಎ.ಎಸ್.ಐ ಜಯನಗರ ಸಂಚಾರ ಪೊಲೀಸ್ ಠಾಣೆ.
5. ಶ್ರೀ. ನವೀನ್ ಆರ್. ಪಿ.ಸಿ. ಜಯನಗರ ಸಂಚಾರ ಪೊಲೀಸ್ ಠಾಣೆ.
6. ಶ್ರೀಮತಿ. ಸುರೇಖ, ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 144.
7. ಶ್ರೀ. ಎಂ.ಎಂ. ಬಾಬು, ಕಂದಾಯ ಪರಿವೀಕ್ಷಕರು ವಾರ್ಡ್–144.
8. ಹಾಗೂ ಸಾರ್ವಜನಿಕರು.

*********

1. ಶ್ರೀ. ಜಯರಾಮ್ ರವರು ಮಾತನಾಡಿ ಮಲ್ಲಿಗೆ ಆಸ್ಪತ್ರೆಯನ್ನು 99 ವರ್ಷಕ್ಕೆ ಗುತ್ತಿಗೆ ನೀಡಿರುವ ದಾಖಲೆಗಳನ್ನು ನೀಡಲು ಕೋರಿದರು. ಇದರನ್ವಯ ವಾರ್ಡಿನ ಕಂದಾಯ ಪರಿವೀಕ್ಷಕರಾದ ಶ್ರೀ. ಎಂ.ಎಂ. ಬಾಬು ರವರು ಮಲ್ಲಿಗೆ ಆಸ್ಪತ್ರೆಯು ಮಹಾಬೋಧಿ ಸಂಸ್ಥೆಗೆ 99 ವರ್ಷಕ್ಕೆ ಗುತ್ತಿಗೆ ನೀಡಿರುವುದು ನಿಜವೆಂದು ತಿಳಿಸಿದ್ದು, ದಾಖಲೆಗಳು ಮೇಲಾಧಿಕಾರಿಗಳ ಕಛೇರಿಯಲ್ಲಿದೆ ಎಂದ ತಿಳಿಸಿದರು.



Scanned with CamScanner

2. ಶ್ರೀ. ಜಯರಾಮ್ ರವರು ಮಾತನಾಡಿ ಮಲ್ಲಿಗೆ ಆಸ್ಪತ್ರೆ ಹತ್ತಿರ ಸಾರ್ವಜನಿಕರ ಶೌಚಾಲಯ ನಿರ್ಮಿಸಲು ಹಾಗೂ ವಾರ್ಡಿನ ಮೂರು ಭಾಗದಲ್ಲಿ ಸಿ.ಸಿ. ಟಿ.ವಿ ಅಳವಡಿಸಲು ಕೋರಿದ್ದು, ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರರು ಮುಂದಿನ ಅನುದಾನ ಬಂದಲ್ಲಿ ನಿಗಧಿತ ಸಮಯದಲ್ಲಿ ಅಂದಾಜು ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

3. ಶ್ರೀ. ಜಯರಾಮ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಹಾಕಿರುವ ನಾಮಫಲಕದಲ್ಲಿ ಆಗಿರುವ ಲೋಪವನ್ನು ಸರಿಪಡಿಸಲು ತಿಳಿಸಿದರು. ಹಾಗೂ 6ನೇ ಅಡ್ಡರಸ್ತೆ ಗುಟ್ಟೇಪಾಳ್ಯ ರಸ್ತೆಯನ್ನು ಪ್ರಾರಂಭಿಸಲು ಕೋರಿದರು. ವಾರ್ಡಿನ ಸಹಾಯಕ ಅಭಿಯಂತರರು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ನೋಡಲ್ ಅಧಿಕಾರಿಯವರಿಗೆ ತಿಳಿಸಿದರು.

4. ಶ್ರೀ. ಸುರೇಶ್ ಎಸ್.ಎಂ. ರವರು ಮಾತನಾಡಿ ಶ್ರೀ ಎಲ್ಲಮ್ಮ ದೇವಸ್ಥಾನದ ಹತ್ತಿರ ಇರುವ ತ್ರಿಕೋಣಾಕೃತಿ ಪಾರ್ಕ್‌ಗಳನ್ನು ಸ್ವಚ್ಛಗೊಳಿಸಲು. ನಾಮಫಲಕವನ್ನು ಸರಿಪಡಿಸಲು ಹಾಗೂ ಪಾಲಿಕೆಯ ಜಾಗಗಳ ಬಗ್ಗೆ ಕ್ರಮ ವಹಿಸಲು ಕೋರಿದರು. ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರು ಹಾಗೂ ಕಂದಾಯ ಪರಿವೀಕ್ಷಕರಾದ ಶ್ರೀ. ಎಂ.ಎಂ. ಬಾಬು ರವರು ಸರಿಪಡಿಸಲು ಕ್ರಮ ವಹಿಸುವುದಾಗಿ ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಯವರಿಗೆ ತಿಳಿಸಿದರು.

5. ಶ್ರೀ. ಸುರೇಶ್ ಹೆಚ್.ಕೆ. ರವರು ಮಾತನಾಡಿ ಸೋಮೇಶ್ವರನಗರ ಮುಖ್ಯರಸ್ತೆ, ಹೊಸೂರು ಮುಖ್ಯರಸ್ತೆ ಹಾಗೂ ಸಿದ್ದಾಪುರ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ಸೈನ್ ಬೋರ್ಡ್ ಅಳವಡಿಸಲು ಹಾಗೂ ಅನಧಿಕೃತವಾಗಿ ನಿಂತ ವಾಹನಗಳನ್ನು ತೆರವುಗೊಳಿಸಲು ಕೋರಿದರು. ಇದರನ್ವಯ ಸಭೆಗೆ ಹಾಜರಿದ್ದ, ಜಯನಗರ ಸಂಚಾರ ಪೊಲೀಸ್ ಠಾಣೆಯ ಅಧಿಕಾರಿಯಾದ ಶ್ರೀ. ಮಹದೇವಯ್ಯ ರವರು ಇನ್ನು ಒಂದು ವಾರದಲ್ಲಿ ಸರಿಪಡಿಸುವುದಾಗಿ ಸಭೆಗೆ ತಿಳಿಸಿದರು.

6. ಶ್ರೀ. ಸುರೇಶ್ ಹೆಚ್.ಕೆ. ರವರು ಮಾತನಾಡಿ ಸೋಮೇಶ್ವರನಗರ ಮುಖ್ಯರಸ್ತೆಯಲ್ಲಿರುವ ಅರೆಕೆಂಪನಹಳ್ಳಿ 2ನೇ ಅಡ್ಡರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಒಳಚರಂಡಿ ಕೊಳವೆಯನ್ನು ಅಳವಡಿಸಲು ರಸ್ತೆ ಕತ್ತರಿಸಿದ್ದು, ರಸ್ತೆಯನ್ನು ಯಥಾಸ್ಥಿತಿಗೆ ತರದೇ ಹಾಗೆ ಬಿಟ್ಟಿರುವುದಾಗಿ ದೂರಿದರು. ಅದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡಿನ ಅಭಿಯಂತರರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.



Scanned with CamScanner

7. ಶ್ರೀ. ಸುರೇಶ್ ಹೆಚ್.ಕೆ. ರವರು ಮಾತನಾಡಿ ಸೋಮೇಶ್ವರನಗರದ ಬ್ರಾಂಡ್ ಫ್ಯಾಕ್ಟರಿ ಹತ್ತಿರ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಟೈಲ್ಸ್‌ಗಳನ್ನು ಸರಿಪಡಿಸಲು ತಿಳಿಸಿದರು. ಇದರನ್ವಯ ನೋಡಲ್ ಅಧಿಕಾರಿಯವರು ಈ ಬಗ್ಗೆ ಕ್ರಮ ವಹಿಸಲು ವಾರ್ಡಿನ ಅಭಿಯಂತರರಿಗೆ ತಿಳಿಸಿದರು.

8. ಶ್ರೀ. ತೇಜಸ್‌ಗೌಡ ರವರು ಮಾತನಾಡಿ ವಾರ್ಡಿನಲ್ಲಿ ಅಳವಡಿಸಿರುವ ನಾಮಫಲಕವನ್ನು ಸರಿಪಡಿಸಲು ಹಾಗೂ ನಾಮಫಲಕದಲ್ಲಿ ಶೇಕಡಾ 80% ರಷ್ಟು ಕನ್ನಡ ಭಾಷೆ ಇರಬೇಕೆಂದು ಕೋರಿದರು. ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರು ಕ್ರಮ ವಹಿಸುವುದಾಗಿ ನೋಡಲ್ ಅಧಿಕಾರಿಯವರಿಗೆ ತಿಳಿಸಿದರು.

9. ಶ್ರೀ. ತೇಜಸ್‌ಗೌಡ ರವರು ಮಾತನಾಡಿ ವಾರ್ಡಿನಲ್ಲಿ ನಕಲು ಗುರುತಿನ ಚೀಟಿಗಳು ಹೆಚ್ಚಾಗಿವೆ ಎಂದು ಆರೋಪಿಸಿದರು ಹಾಗೂ ವಾರ್ಡಿನಲ್ಲಿ ಲೌಡ್ ಸ್ಪೀಕರ್‌ಗಳನ್ನು ಅಳವಡಿಸದಂತೆ ಅಧ್ಯಕ್ಷರಿಗೆ ಮನವರಿಕೆ ಮಾಡಿದರು. ಇದರನ್ವಯ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರಾದ ಶ್ರೀ.ಬಾಬು ರವರಿಗೆ ಹಾಗೂ ಸಿದ್ದಾಪುರ ಪೋಲೀಸ್ ಠಾಣೆಯ ಶ್ರೀ. ಮಂಜುನಾಥ್ ಎ.ಎಸ್.ಐ ರವರಿಗೆ ಕ್ರಮ ವಹಿಸುವಂತೆ ನೋಡಲ್ ಅಧಕಾರಿಯವರು ಸೂಚಿಸಿದರು.

10. ಶ್ರೀ. ನಿಜಾಮುದ್ದೀನ್ ರವರು ಮಾತನಾಡಿ 10ನೇ "ಸಿ" ಅಡ್ಡರಸ್ತೆಗೆ ನಾಮಫಲಕ ಅಳವಡಿಸಲು ಸಿ.ಸಿ. ಟಿವಿ ಅಳವಡಿಸಲು ಕೋರಿದರು ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರರು ಮುಂದಿನ ಅನುದಾನ ಬಂದಲ್ಲಿ ನಿಗಧಿತ ಸಮಯದಲ್ಲಿ ಅಂದಾಜು ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

11. ಶ್ರೀ. ಅಜ್ಮಲ್ ರವರು ಮಾತನಾಡಿ ಮಳೆನೀರು ಬೃಹತ್ ನೀರುಗಾಲುವೆಗೆ ಅಡ್ಡಲಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಮ್ಯಾನ್‌ಹೋಲ್‌ನ್ನು ನಿರ್ಮಿಸಿದ್ದು, ಇದು ಮಳೆಗಾಲದ ಸಮಯದಲ್ಲಿ ನೀರು ಹಿಮ್ಮುಗ್ಗಿ ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ತೊಂದರೆಯಾಗುವ ಸಂಭವವಿದ್ದು, ಮ್ಯಾನ್‌ಹೋಲ್‌ನ್ನು ತೆಗೆದುಹಾಕಲು ಹಾಗೂ ವಾರ್ಡಿನಲ್ಲಿ ಈಗಾಗಲೇ ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ಶಾಸಕರು ಹಾಗೂ ಪಾಲಿಕೆ ಸದಸ್ಯರ ಹೆಸರಿನಲ್ಲಿ ಇಲ್ಲಿಯವರೆಗೆ ಎಷ್ಟು ಅನುದಾನ ನೀಡಲಾಗಿದೆ ಎಂಬ ವಿವರವನ್ನು ಕೋರಿದರು. ಇದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸಿದರು.



Scanned with CamScanner

12. ಶ್ರೀ. ಟಿ. ಮಂಜುನಾಥ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ನಡೆಯುವ ಕಾಮಗಾರಿಗಳಿಗೆ ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಸಂಪೂರ್ಣ ವಿವರವಿರುವ ನಾಮಫಲಕವನ್ನು ಅಳವಡಿಸುವಂತೆ ಕೋರಿದರು. ಹಾಗೂ ಸಿದ್ದಾಪುರ ಮುಖ್ಯರಸ್ತೆಯಲ್ಲಿ ರಸ್ತೆ ಹುಬ್ಬುಗಳನ್ನು ಸರಿಪಡಿಸಲು ಕೋರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸಿದರು.

13. ಶ್ರೀ. ಅಶೋಕ್ ರವರು ಮಾತನಾಡಿ ವಾರ್ಡಿನ ಮುರಳಿ ಸ್ಲಂನಲ್ಲಿ ಪಾಲಿಕೆ ವತಿಯಿಂದ ನಿರ್ಮಿಸಿರುವ ಕಟ್ಟಡವನ್ನು (ಅಯ್ಯಪ್ಪ ದೇವಸ್ಥಾನ) ಸಾರ್ವಜನಿಕರ ಉದ್ದೇಶಕ್ಕಾಗಿ ಸಮುಧಾಯ ಭವನವನ್ನಾಗಿ ಉಪಯೋಗಿಸಲು ಅಧ್ಯಕ್ಷರಿಗೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಉತ್ತರಿಸಿ ವಾರ್ಡಿನ ಸಹಾಯಕ ಅಭಿಯಂತರರವರಿಗೆ ಸದರಿ ವಿಷಯದ ಬಗ್ಗೆ ಗಮನಹರಿಸಲು ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AE 30/11/2021.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

30/11

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner